# ಅಧಿಕಾರ ಅನಧಿಕಾರ

ಧಾರ್ಮಿಕ ಪ್ರಪಂಚದಲ್ಲಿ ಹಲವು ಬಾರಿ 'ಅಧಿಕಾರ' 'ಅನಧಿಕಾರ' ಎಂಬ ಮಾತುಗಳು ಬಳಕೆಯಾಗುತ್ತಿರುತ್ತವೆ. ಇವು ಪ್ರಶ್ನೆಯಾಗಿ ಹಲವು ಬಾರಿ ಕಾಡಿದ್ದುಂಟು. ಚರಿತ್ರೆಯು ಇದನ್ನು ದಾಖಲಿಸಿದೆ. ಈ ಪ್ರಶ್ನೆಗಳ ಅಡಿಯಲ್ಲಿ 'ಸಾಧ್ಯ' ಎಂಬುದು ಒಂದು ಕಡೆ, 'ಸಾಧ್ಯವಿಲ್ಲ' ಎಂಬುದು ಇನ್ನೊಂದು ಕಡೆ ತಾರ್ಕಿಕ ನೆಲೆಯಲ್ಲಿ ಚರ್ಚೆಯಾಗಿದೆ. ಈ ಹಿನ್ನೆಲೆಯಲ್ಲಿ ಅಧಿಕಾರ ಅನಧಿಕಾರ ಎಂಬ ಪರಿಕಲ್ಪನೆಯು ಬೆಳೆದುಕೊಂಡು ಬಂದಿದೆ. ಇವು ಕೇವಲ ಧಾರ್ಮಿಕ ಪ್ರಪಂಚದ ಪ್ರಶ್ನೆಯಾಗಿ ಈಗ ಉಳಿಯದೆ, ತಾತ್ವಿಕ ಪ್ರಶ್ನೆಯಾಗಿಯೂ ಸಾಂಸ್ಕೃತಿಕ ಪ್ರಶ್ನೆಯಾಗಿಯೂ ನಮ್ಮಲ್ಲಿ ನೆಲೆಗೊಂಡಿವೆ.

ಈಗ ಪ್ರಪಂಚವು ತೀವ್ರ ವೇಗದಿಂದ ಮುನ್ನಡೆಯುತ್ತಿದೆಯಷ್ಟೆ. ಇಲ್ಲಿ ಬದಲಾವಣೆ 'ಅನಿವಾರ್ಯ' ಎಂಬಂತೆ ಸಾಗುತ್ತಿದೆ. ಇದು ಕೇವಲ 'ಅನಿವಾರ್ಯ' ಎಂದು ಒಪ್ಪಿಕೊಳ್ಳಬೇಕೋ 'ಯಾತಾಯಾತ' ಎಂದು ಒಪ್ಪಿಕೊಳ್ಳಬೇಕೊ? ಭಾರತದಂಥ ಸಂಕೀರ್ಣ ಸಮಾಜದಲ್ಲಿ ಸುಲಭವಾಗಿ ನಾವು ಉತ್ತರ ಪಡೆಯಲು ಸಾಧ್ಯವಿಲ್ಲ. ಈ ಸಂಗತಿಯನ್ನು ಇನ್ನೊಂದು ದಿಕ್ಕಿನಿಂದ ನೋಡಲು ಸಾಧ್ಯವೇ? ಒಂದಿಷ್ಟು ಯೋಚಿಸೋಣ. ವೇದಗಳನ್ನು ಓದುವ ಅಧಿಕಾರ ತ್ರೈವರ್ಣಿಕರಿಗೆ ಮಾತ್ರ ಸೇರಿದ್ದೆಂದೂ ಉಪನಯನವಿಲ್ಲದೆ 'ವೇದಾಧಿಕಾರ' ಸಾಧ್ಯವಿಲ್ಲವೆಂದೂ ಈ ಹಿಂದೆ ಧರ್ಮಶಾಸ್ತ್ರಗಳು ಹೇಳುತ್ತಿದ್ದವು. ಇಲ್ಲಿ ತ್ರೈವರ್ಣಿಕರಿಗೆ ಹೊರತು ಪಡಿಸಿದರೆ ಉಳಿದವರಿಗೆ ಸಾಧ್ಯವಿಲ್ಲವೆಂಬುದು ಇದರಿಂದ ನಿಶ್ಚಿತವಾಯಿತು. ಅಂದರೆ, ಮೂರು ವರ್ಣದವರನ್ನು ಹೊರತುಪಡಿಸಿ ಯಾರಿಗೂ ವೇದಾಧಿಕಾರವಿಲ್ಲವೆಂಬುದು ಇದರಿಂದ ಪ್ರತೀತವಾಯಿತು. ಆದರೆ, ವರ್ತಮಾನಕಾಲದಲ್ಲಿ ನಾವಿದ್ದೇವೆ. ತಂತ್ರಜ್ಞಾನ ನಾಗಾಲೋಟದಲ್ಲಿ ಓಡುತ್ತಿದೆ. ಇದನ್ನು ಓದಕೂಡದು; ಇದನ್ನು ಓದಬಹುದು ಎಂದು ನಿರ್ಣಯಿಸುವ ಬಗೆ ಈಗ ಇಲ್ಲವಾಗಿದೆ. ಋಗ್, ಯಜು, ಸಾಮ ಮೂರು ವೇದಗಳು ಈಗ ಮುದ್ರಣಗೊಂಡಿವೆ. ಅಂಗಡಿಗಳಲ್ಲಿ ಆ ಗ್ರಂಥಗಳು ಸಿಗುತ್ತಿವೆ. ಸಮಸ್ತ ವೇದವೆಲ್ಲವೂ ಸ್ವರಸಹಿತವಾಗಿ ಕೇಳಲು ಸಿ.ಡಿ.ಗಳೂ ಲಭ್ಯವಿವೆ. ಇನ್ನೇನು! ವೇದಾಧಿಕಾರಕ್ಕೆ ಕೀಲಿಕೈ ಸಿಕ್ಕಂತಾಯಿತಲ್ಲಎಂದು ನಾವು ತೃಪ್ತಿಪಡಬಹುದು. ಇದು ಒಂದು ರೀತಿಯಲ್ಲಿ ಅರ್ಧಸತ್ಯ ಮಾತ್ರ.

ನಾವು ಈಗ ಮಾಹಿತಿಯುಗದಲ್ಲಿ ಇದ್ದೇವೆ. ಈ ಯುಗದಲ್ಲಿ ಯಾವುದಾದರೂ ಸರಿ, ಅಂಗೈಮೇಲೆ ಬಂದು ಕುಳಿತುಕೊಳ್ಳುವ ಸೌಭಾಗ್ಯ ನಮಗೊದಗಿದೆ. ಇದು 'ಅಧಿಕಾರ' ಎಂಬ ಪರಿಕಲ್ಪನೆಯ ಒಂದು ಬಗೆ ಅಷ್ಟೆ. ಜರ್ಮನಿಯ ವೇದವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ಮಹಾಶಯ ಋಗ್ವೇದವನ್ನು ಭಾಷ್ಯ ಸಹಿತವಾಗಿ ಮೊದಲಿಗೆ ಹೊರತಂದದ್ದು ಸರಿಯಷ್ಟೆ. ಇದು ಒಂದು ರೀತಿಯಲ್ಲಿ ಸರಿಯಾದ ದಾರಿ. ಆದರೆ, ವೇದದ ಆಧ್ಯಾತ್ಮಿಕ ಅರ್ಥವನ್ನು ಅವನು ತಿಳಿಯದೇ ಹೋದ. ವೈದಿಕ ಭಾಷೆ ಮಂತ್ರಾತ್ಮಕವಾದುದು. ಈ ರಹಸ್ಯವನ್ನು ಪಶ್ಚಿಮದ ಬಹಳಷ್ಟು ವಿದ್ವಾಂಸರು ತಿಳಿಯದೇ ಹೋದರು. ಭಾರತೀಯ ಶಾಸ್ತ್ರವನ್ನು ಗುರುವಿನ ಮೂಲಕ ತಿಳಿಯುವುದೇ ಸರಿಯಾದ ದಾರಿ. ಇದು ಕೇವಲ ಗ್ರಂಥಗಳಿಂದಲೋ ಸ್ವಂತ ಓದಿನಿಂದಲೋ ದೊರಕುವ ವಿದ್ಯೆಯಲ್ಲ. ಈ ಮಾತು ಭಾರತಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಪ್ರಪಂಚದ ಯಾವುದೇ ಧಾರ್ಮಿಕ ಸಾಹಿತ್ಯಕ್ಕೆ ಅನ್ವಯವಾಗುವ ಸಂಗತಿ. ಆಯಾಯ ಶಾಸ್ತ್ರಜ್ಞರು ಈ ವಿಚಾರದ ಬಗೆಗೆ ಸಾಕಷ್ಟು ಯೋಚಿಸಿದ್ದಾರೆ. ಮತಾಚರಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಧರ್ಮಶಾಸ್ತ್ರಗಳ ಮೂಲಕ ಪರಿಹರಿಸಿಕೊಳ್ಳುತ್ತಿದ್ದುದುಂಟು.

ನಾವಿಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಧರ್ಮಶಾಸ್ತ್ರಗಳು ಕೂಡ ಕಾಲಕಾಲಕ್ಕೆ ಬದಲಾವಣೆಗೊಳ್ಳುತ್ತಿದ್ದವೆಂಬುದನ್ನು ಗ್ರಹಿಸುವುದು ಅವಶ್ಯ. ಈ ಹಿನ್ನೆಲೆಯಲ್ಲಿ 'ಅಧಿಕಾರ' ಮತ್ತು 'ಅನಧಿಕಾರ' ಎಂಬ ಪರಿಕಲ್ಪನೆಗಳು ಸರಳವಾದ ಮಾತುಗಳಿಂದ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಪ್ರತಿಯೊಂದು ಶಾಸ್ತ್ರಕ್ಕೂ ಅಥವ ಪ್ರತಿಯೊಂದು ವಿಚಾರಗಳಿಗೂ ತನ್ನದೇ ಆದ ಕೆಲವು ಮಾರ್ಗಗಳು ಇದ್ದೇ ಇರುತ್ತವೆ. ಆ ಮಾರ್ಗಗಳ ರಹಸ್ಯವನ್ನು ಆ ದಾರಿಯಲ್ಲಿ ನಡೆದಿರುವವರಿಗೆ ಮಾತ್ರ ಗೊತ್ತಿರುತ್ತಿತ್ತು. ಈ ಸಂಗತಿಯನ್ನು ನಾವು ಗಮನಿಸುವುದು ಅವಶ್ಯ. ಒಂದೊಂದು ವಿಷಯಗಳಲ್ಲಿ ತಜ್ಞತೆ ಇರುವವರು ಮಾತ್ರ ಅಧಿಕಾರ ಪಡೆಯಲು ಸಾಧ್ಯವಿದೆ. ಅಂಥವರು ಮಾತ್ರ ಆಯಾಯ ವಿಷಯಗಳಿಗೆ ಬಾಧ್ಯಸ್ಥರಾಗಿರುತ್ತಾರೆ. ಅಣುವಿಜ್ಞಾನದಲ್ಲಿ ಪರಿಣತಿ ಪಡೆದಿರುವವರು ವೈದ್ಯರಾಗಲು ಸಾಧ್ಯವಿಲ್ಲವಷ್ಟೆ. ವೈದ್ಯಶಾಸ್ತ್ರದಲ್ಲಿ ಪರಿಣತಿ ಪಡೆದವರು ತಂತ್ರಜ್ಞರಾಗಲು ಸಾಧ್ಯವಿಲ್ಲ. ಇಲ್ಲಿ ಆಯಾಯ ವಿಷಯಗಳ ಪರಿಣತಿಯ ಸಾಧ್ಯತೆಯನ್ನು ನಾವು ಗಮನಿಸಬೇಕಾಗುತ್ತದೆ. ನಾವು ಯಾವುದೇ ವಿಷಯವನ್ನು ಆಯಾ ತಜ್ಞರಿಂದ ತಿಳಿಯುವುದೇ ಯುಕ್ತವಾದುದು. ಇಲ್ಲಿ ಅಧಿಕಾರ ಅನಧಿಕಾರ ಎಂಬ ಮಾತುಗಳು ವರ್ಣಕ್ಕೂ ಜಾತಿಗೂ ಸಂಬಂಧಿಸಿದ್ದಲ್ಲ. ಅದು ಪರಿಣತಿಯ ಪ್ರಶ್ನೆಯಾಗಿ ಮಾತ್ರ ಈಗ ನೋಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸ್ವತಂತ್ರವಾಗಿ 'ಶಾಸ್ತ್ರವಿದ್ಯೆ' 'ವೇದವಿದ್ಯೆ' ಇವುಗಳನ್ನು ಸ್ವತಂತ್ರವಾಗಿ ತಿಳಿಯುವುದು ಅರ್ಧಸತ್ಯದ ದಾರಿ. ಆದರೆ, ಒಂದಂತೂ ನಿಜ. ವಿದ್ಯೆ ಒಲಿದವನ ಅಥವಾ ಅನ್ವೇಷಕ ಬುದ್ಧಿ ಉಳ್ಳವನ ಸ್ವತ್ತು. ಇದು ಅಧಿಕಾರ ಮತ್ತು ಅನಧಿಕಾರ ಎಂಬ ಮಾತುಗಳನ್ನು ಬೇರೊಂದು ಮಗ್ಗುಲಿನಿಂದ ನೋಡಲು ಸಾಧ್ಯವಾಗುತ್ತದೆ.

■ ಪುರಂಜೀವಿ

## ಮಾತೇ ಮುತ್ತು

◆ ಪ್ರೇಮ ಎನ್ನುವುದು ದಡ್ಡನ ಬುದ್ಧಿವಂತಿಕೆ, ಜಾಣನ ದಡ್ಡತನ.

—ವಿಲಿಯಂ ಕುಕ್

◆ ಎಲ್ಲಕ್ಕಿಂತ ಕಡಿಮೆ ಇರುವುದನ್ನೇ ನಾವು ಹೆಚ್ಚು ನಂಬುತ್ತೇವೆ.

—ಥಾಮಸ್ ಕೆಂಪಿಸ್

◆ ದೇಶದ ಪ್ರಗತಿ ಯಾವುದೇ ಧರ್ಮ ಮತ್ತು ಪೂಜಾವಿಧಿಗಳನ್ನು ಅವಲಂಬಿಸಿರುವುದಿಲ್ಲ.

—ಎಚ್ ನರಸಿಂಹಯ್ಯ

◆ ಕರುಣೆ ಉಳ್ಳವರು ಧನ್ಯರು, ಏಕೆಂದರೆ ಅವರಿಗೆ ದೇವರ ಕರುಣೆ ಲಭಿಸುತ್ತದೆ.

—ಬೈಬಲ್

◆ ಶ್ರೀಮಂತರು ಕಾನೂನಿನ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಕಾನೂನುಗಳೋ ಬಡವರ ಮೇಲೆ ಅಧಿಕಾರ ಚಲಾಯಿಸುತ್ತವೆ.

—ಗೋಲ್ಡ್‌ಸ್ಮಿತ್

◆ ಒಂದೇ ಪ್ರಪಂಚ ಒಬ್ಬರ ಮನಸ್ಸಿಗೆ ಸ್ವರ್ಗದಂತೆ ಕಂಡರೆ, ಮತ್ತೊಬ್ಬರಿಗೆ ನರಕದಂತೆ ಕಾಣುತ್ತದೆ.

—ಎಮರ್ಸನ್

◆ ಸುಖದಲ್ಲಿ ಮುಕ್ತಾಯವಾಗುವ ದುಃಖವೂ ತೃಪ್ತಿಕರವೇ.

—ಈಸ್ಕಿಲಸ್

◆ ಈ ಪ್ರಪಂಚದಲ್ಲಿ ರಾಜಕಾರಣಿಗಳೇ ಇನ್ನೂ ಪ್ರಮುಖ ಸ್ಥಾನಗಳಲ್ಲಿರುವುದು ದುರ್ದೈವದ ಸಂಗತಿಯಾದರೂ ಅದೇ ವಾಸ್ತವ.

—ಜಾರ್ಜ್ ಬರ್ನಾಡ್ ಷಾ

◆ ಬಂಧಿಸಲ್ಪಟ್ಟ ದೇವರೇ ಮನುಷ್ಯ, ಬಂಧನದಿಂದ ಬಿಡಿಸಿಕೊಂಡ ಮನುಷ್ಯನೇ ದೇವರು.

—ಶ್ರೀರಾಮಕೃಷ್ಣ

◆ ಕೆಟ್ಟದ್ದನ್ನು ಮಾಡಲೇಬೇಕೆಂದು ಬಯಸುವವನಿಗೆ ಅವಕಾಶಗಳ ಕೊರತೆ ಇರದು.

—ಪಿ. ಸೈರಸ್